**ಸಿ.ಸಿ.ನಂ.: 597/2024**

ಪಿ.ಡಬ್ಲ್ಯೂ:1

(ಇಂದು ದಿನಾಂಕಃ **12-02-2026** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲು -ಆರೋಪಿ ಪರ ಶ್ರೀ P.T.M. ವಕೀಲರಿಂದ**

1. ನಾನು ಫಿರ್ಯಾದಿ ಸಂಸ್ಥೆಯಲ್ಲಿ ಕಳೇದ 2 ½ ವರ್ಷಗಳಿಂದ ಕೆಲಸವನ್ನು ಮಾಡುತ್ತಿದ್ದೇನೆ. ಈ ಪ್ರಕರಣದಲ್ಲಿ ಹಾಜರುಪಡಿಸಿದ ಎಲ್ಲಾ ದಾಖಲಾತಿಗಳ ಬಗ್ಗೆ ಮಾಹಿತಿ ಇದೆ. ಈ ಪ್ರಕರಣದ ಸಾಲವನ್ನು ಪಡೆದುಕೊಳ್ಳಲು ಆರೋಪಿತನು ಹಾಗೂ ಆತನೊಂದಿಗೆ ಗಣೇಶ ಪರಶುರಾಮ ಪಾಟೀಲ ಹಾಗೂ ನಾಗರಾಜ ನಾಗಪ್ಪಾ ಹರಿಕಂತ್ರ ಇವರು ಬಂದಿರುತ್ತಾರೆ. ಈ ಪ್ರಕರಣದಲ್ಲಿ ಸಾಕ್ಷಿ ನುಡಿಯಲು ನನಗೆ ಅಧಿಕಾರ ಪತ್ರ ಇಲ್ಲ ಎಂದರೆ ಸರಿಯಲ್ಲ. ನಿಪಿ2 ರಲ್ಲಿ ನಮೂದಿಸಿದ ಹಣವು ನಮಗೆ ಬರಲು ಬಾಕಿ ಇದೆ ಎಂಬುವುದನ್ನು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇವೆ. ನಿಪಿ2 ರಲ್ಲಿ ಬರೆದಿರುವ ವಿಷಯದ ಶಾಹಿಗೂ ಹಾಗೂ ನಿಪಿ2ಎ ಯಲ್ಲಿನ ಶಾಹಿಗೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ.

2. ಈ ಪ್ರಕರಣದ ಸಾಲಕ್ಕೆ ಜಾಮೀನುದಾರರಾಗಿದ್ದ ವ್ಯಕ್ತಿಗಳು ಯಾವ ಕೆಲಸವನ್ನು ಮಾಡುತ್ತಾರೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ನಿಪಿ2 ನ್ನು ಆರೋಪಿತನು ನಮ್ಮ ಫಿರ್ಯಾದಿ ಸಂಸ್ಥೆಗೆ ಬಂದು ನೀಡಿರುತ್ತಾರೆ.

3. ನಿಪಿ9 ನಮ್ಮ ಸಂಘದ ನಮೂನೆ ಎಂದರೆ ಸರಿ. ಸಾಲವನ್ನು ನೀಡುವಾಗ ದಾಖಲೆಗಳನ್ನು ಪಡೆದುಕೊಂಡು ವಿವರಗಳನ್ನು ನಮ್ಮ ಫಿರ್ಯಾದಿ ಸಂಸ್ಥೆಯರು ನಮೂದಿಸುತ್ತಾರೆ ಎಂದರೆ ಸಾಕ್ಷಿಯು

ಕೆಲವೊಮ್ಮೆ ಸಾಲಗಾರನು ಹೇಳಿದಂತೆ ಬರೆಯುತ್ತಾರೆ ಹಾಗೂ ಕೆಲವೊಮ್ಮೆ ಸಾಲಗಾರರೇ ಭರಣಾ ಮಾಡಿ ನೀಡುತ್ತಾರೆ ಎಂದು ನುಡಿಯುತ್ತಾರೆ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆ.ಪ್ರ.ದ.ನ್ಯಾ.ದಂ. ಕುಮಟಾ